47

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ಪಿ. ಸುಜಾ ಕುಶಾಲಪ್ಪ ರವರು ಶೂನ್ಯ ವೇಳೆಯಲ್ಲಿ "ಹಾರಂಗಿ ಅಣೆಕಟ್ಟು ಯೋಜನಾ ವ್ಯಾಪ್ತಿಗೆ ಸೇರಿದ ನೂರಾರು ಸಂಖ್ಯೆಯ ಕಟ್ಟಡಗಳು, ವಸತಿಗೃಹಗಳು ಸಮಗ್ರ ನಿರ್ವಹಣೆ ಕೊರತೆ ಎದುರಿಸುತ್ತಿದ್ದು, ಇದರಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟದ ಕುರಿತು" ಪ್ರಸ್ತಾಪಿಸಿರುವ ಪ್ರಸ್ತಾವಕ್ಕೆ ಮಾನ್ಯ ಉಪ ಮುಖ್ಯಮಂತ್ರಿಯವರ ಉತ್ತರ.**

*****

ಹಾರಂಗಿ ಯೋಜನಾ ವ್ಯಾಪ್ತಿಗೆ ಸೇರಿದ ಹಾರಂಗಿ ಪುನರ್ವಸತಿ ವಿಭಾಗ, ಕುಶಾಲನಗರ ವ್ಯಾಪ್ತಿಯಲ್ಲಿ 115 ವಸತಿ ಗೃಹಗಳಿದ್ದು, ಸದರಿ ವಸತಿ ಗೃಹಗಳನ್ನು ಸಹಾಯಕ ಕಾರ್ಯಪಾಕ ಇಂಜಿನಿಯರ್, ಸಂಖ್ಯೆ.4 ಹಾರಂಗಿ ಪುನರ್ವಸತಿ ಉಪ ವಿಭಾಗ ಕುಶಾಲನಗರ ರವರು ನಿರ್ವಹಣೆ ಮಾಡುತ್ತಿರುತ್ತಾರೆ. ಈ ಪೈಕಿ 31 ವಸತಿ ಗೃಹಗಳಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತ ಹಾಗೂ 54 ವಸತಿ ಗೃಹಗಳಲ್ಲಿ ಅನ್ಯ ಇಲಾಖೆಯವರು ವಾಸ ಮಾಡುತ್ತಿದ್ದು, ಇನ್ನುಳಿದ 30 ವಸತಿ ಗೃಹಗಳು ಖಾಲಿ ಇರುತ್ತವೆ.

ಮುಂದುವರೆದು, ಹಾರಂಗಿ ಅಣೆಕಟ್ಟು ಉಪವಿಭಾಗ ವ್ಯಾಪ್ತಿಯಲ್ಲಿ 145 ವಸತಿ ಗೃಹಗಳಿದ್ದು, ಸದರಿ ವಸತಿ ಗೃಹಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ಸಂಖ್ಯೆ.1, ಹಾರಂಗಿ ಅಣೆಕಟ್ಟು ಉಪ ವಿಭಾಗ, ಹುಲುಗುಂದ ರವರು ನಿರ್ವಹಣೆ ಮಾಡುತ್ತಿರುತ್ತಾರೆ. ಈ ಪೈಕಿ 14 ವಸತಿ ಗೃಹಗಳಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತದ ಹಾಗೂ 55 ವಸತಿ ಗೃಹಗಳಲ್ಲಿ ಅನ್ಯ ಇಲಾಖೆಯವರು ವಾಸ ಮಾಡುತ್ತಿದ್ದು, ಇನ್ನುಳಿದ 76 ವಸತಿ ಗೃಹಗಳು ಖಾಲಿ ಇರುತ್ತವೆ.

ಈ ಎಲ್ಲಾ ವಸತಿ ಗೃಹಗಳನ್ನು ಸುಮಾರು ಐವತ್ತು ವರ್ಷಗಳಷ್ಟು ಹಿಂದೆ ನಿರ್ಮಿಸಲಾಗಿದ್ದು, ಹಾಲಿ ಜಲಸಂಪನ್ಮೂಲ ಇಲಾಖೆಯ ಹಾಗೂ ಅನ್ಯ ಇಲಾಖೆಯವರು ವಾಸಿಸುತ್ತಿರುವ ವಸತಿ ಗೃಹಗಳು ಸುಸ್ಥಿತಿಯಲ್ಲಿರುತ್ತವೆ. ಖಾಲಿ ಇರುವ ವಸತಿ ಗೃಹಗಳನ್ನು ಸುಸ್ಥಿತಿಯಲ್ಲಿಡಲು ಹಾಗೂ ನಿರ್ವಹಣೆ ಮಾಡಲು ಅವಶ್ಯಕ ಕ್ರಮವಹಿಸಲಾಗುತ್ತಿದೆ.

**ಸಂಖ್ಯೆ:ಜಸಂಇ 49 ಎನ್ಎಲ್ಎ 2023**

(ಡಿ. ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು